ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 20-12-20

ಕೇಂದ್ರ ಸಚಿವ ನಿತಿನ್ ಗಡ್ಕರಿ ಭರವಸೆ । ಹೆದ್ದಾರಿ ಯೋಜನೆಗಳಿಗೆ ವರ್ಚುಯಲ್ ಶಂಕು

# ಕೇಂದ್ರದಿಂದ ಶೀಘ್ರ ಎಥೆನಾಲ್ ನೀತಿ

■ ವಿಕ ಸುದ್ದಿಲೋಕ ಬೆಂಗಳೂರು 20/12/20

ಕಬ್ಬು ಮತ್ತು ಭತ್ತ ಬೆಳೆಯುವ ರೈತರ ಹಿತ ಕಾಯಲು ಎಥೆನಾಲ್ ನೀತಿ ರೂಪಿಸಲಾಗುವುದು ಎಂದು ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಭರವಸೆ ನೀಡಿದ್ದಾರೆ.

ರಾಜ್ಯದಲ್ಲಿ 10,904 ಕೋಟಿ ರೂ. ವೆಚ್ಚದಲ್ಲಿ 1,197 ಕಿ.ಮೀ. ಉದ್ದದ 33 ರಾಷ್ಟ್ರೀಯ ಹೆದ್ದಾರಿ ಯೋಜನೆ ಸಂಬಂಧ ಶಂಕುಸ್ಥಾಪನೆ ಹಾಗೂ ಲೋಕಾರ್ಪಣೆ ಕಾರ್ಯವನ್ನು ವರ್ಚುಯಲ್ ಮಾಧ್ಯಮದ ಮೂಲಕ ಕೇಂದ್ರ ಸಚಿವರು ಶನಿವಾರ ನೆರವೇರಿಸಿದರು.

ಈ ವೇಳೆ ಮಾತನಾಡಿದ ಕೇಂದ್ರ ಸಚಿವ ನಿತಿನ್ ಗಡ್ಕರಿ, "ಕಬ್ಬು ಹಾಗೂ ಭತ್ತ ಬೆಳೆಯುವವರ ಸಂಕಷ್ಟದ ಬಗ್ಗೆ ಕೇಂದ್ರ ಸರಕಾರಕ್ಕೆ ತಿಳಿದಿದೆ. ಸಕ್ಕರೆ, ಅಕ್ಕಿ ಉತ್ಪಾದನೆ ದೇಶದಲ್ಲಿ ಅಧಿಕವಾಗಿದೆ. ಎಥೆನಾಲ್ ನೀತಿ ರೂಪಿಸಿ ಜಾರಿಗೊಳಿಸುವುದರಿಂದ ರೈತರಿಗೆ ಅನುಕೂಲವಾಗಲಿದೆ," ಎಂದು ತಿಳಿಸಿದರು.

ಭಾರತಮಾಲಾ ಮತ್ತಿತರ ಯೋಜನೆಗಳ ಅಡಿ 31,035 ಕೋಟಿ ರೂ.ವೆಚ್ಚದ 19 ಕಾಮಗಾರಿಗಳು ಪ್ರಗತಿಯಲ್ಲಿವೆ. ಗೋವಾ ಗಡಿಯಿಂದ ಕೇರಳದ ಗಡಿಯವರೆಗಿನ ಸಂಪೂರ್ಣ ಕರಾವಳಿ ರಸ್ತೆಯನ್ನು ಬೇಲೇಕೇರಿ, ಕಾರವಾರ ಮತ್ತು ಮಂಗಳೂರು ಬಂದರುಗಳೊಂದಿಗೆ ಸಂಪರ್ಕಿಸಲಾಗುತ್ತಿದ್ದು, ಬಹುತೇಕ ಕಾಮಗಾರಿಯೂ ಪೂರ್ಣಗೊಂಡಿದೆ ಎಂದರು.

ಬಳಕೆದಾರರ ಸುರಕ್ಷತೆ ದೃಷ್ಟಿಯಿಂದ ರಾಷ್ಟ್ರೀಯ ಹೆದ್ದಾರಿ 75ರಲ್ಲಿರುವ ಶಿರಾಡಿ ಘಾಟ್, ರಾ.ಹೆ.73ರ ಚಾರ್ಮಾಡಿ ಘಾಟ್ ಹಾಗೂ ರಾ.ಹೆ.275 ರಲ್ಲಿರುವ ಸಂಪಾಜೆ ಘಾಟ್‌ನ ಇಳಿಜಾರಿನಲ್ಲಿ ರಕ್ಷಣಾ ಕ್ರಮ ಕೈಗೊಳ್ಳಲು 115 ಕೋಟಿ ರೂ. ವೆಚ್ಚದ 3 ಕಾಮಗಾರಿ ಮಂಜೂರು ಮಾಡಲಾಗಿದೆ. ದಾಬಸ್‌ಪೇಟೆ ಬಳಿಯ ಮುದ್ದಲಿಂಗೇನಹಳ್ಳಿಯಲ್ಲಿ ಬಹುವಿಧ ಲಾಜಿಸ್ಟಿಕ್ಸ್ ಪಾರ್ಕ್ ಸ್ಥಾಪನೆಯ ಕುರಿತ ಅಂತಿಮ ಕಾರ್ಯಸಾಧ್ಯತಾ ವರದಿ ಫೆಬ್ರವರಿ 2021ರಲ್ಲಿ ಸಲ್ಲಿಕೆಯಾಗುವ ನಿರೀಕ್ಷೆಯಿದೆ ಎಂದು ಹೇಳಿದರು.

**ಕಾರಿಡಾರ್:** "ಚೆನ್ನೈ-ಬೆಂಗಳೂರು ಕೈಗಾರಿಕಾ ಕಾರಿಡಾರ್ ಯೋಜನೆಯನ್ನು ಆದ್ಯತೆಯಾಗಿ ಗುರುತಿಸಲಾಗಿದೆ. ಯೋಜನೆ ಸಂಬಂಧ ಕರ್ನಾಟಕದಲ್ಲಿ 76 ಕಿ.ಮೀ. ಉದ್ದದ ಕಾಮಗಾರಿಗೆ 3 ಯೋಜನೆ ಅನುಮೋದಿಸಿ ಟೆಂಡರ್ ಆಹ್ವಾನಿಸಲಾಗಿದೆ. ಶಿರಾಡಿ ಘಾಟ್‌ನಲ್ಲಿ 23.60 ಕಿ.ಮೀ ಉದ್ದದ ಸುರಂಗದ ಕಾಮಗಾರಿಗೆ ವಿಸ್ತೃತ ಯೋಜನಾ ವರದಿಯನ್ನು ಅನುಮೋದಿಸಲಾಗಿದೆ. ಇದರ ಅಂದಾಜು ವೆಚ್ಚ 10,000 ಕೋಟಿ ರೂ. ಆಗಿದೆ," ಎಂದರು. "ಸಿಆರ್‌ಎಫ್ ಅಡಿ ಈ ಸಾಲಿನ ಮೊದಲ ಕಂತಿನಲ್ಲಿ ಬಿಡುಗಡೆ ಮಾಡಿದ 217 ಕೋಟಿ ರೂ. ಗಳ ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಬೇಕು. ನಂತರ ಮತ್ತೊಂದು ಸುತ್ತಿನಲ್ಲಿ ಈಗಾಗಲೇ ಮಂಜೂರಾಗಿರುವ 218 ಕೋಟಿ ರೂ. ಬಿಡುಗಡೆ ಮಾಡಲಾಗುವುದು," ಎಂದು ಸೂಚಿಸಿದರು.



ಹೆದ್ದಾರಿ ಶಂಕುಸ್ಥಾಪನೆ ಹಾಗೂ ಲೋಕಾರ್ಪಣೆ ವರ್ಚುಯಲ್ ಕಾರ್ಯಕ್ರಮದಲ್ಲಿ ಸಿಎಂ ಯಡಿಯೂರಪ್ಪ, ಸಚಿವರು ಹಾಗೂ ಅಧಿಕಾರಿಗಳು

ರಾಷ್ಟ್ರೀಯ ಹೆದ್ದಾರಿ ಮತ್ತು ರಸ್ತೆ ಸಾರಿಗೆ ಇಲಾಖೆಯಿಂದ ಮುಂಬರುವ ವರ್ಷಗಳಲ್ಲಿ ಕರ್ನಾಟಕದಲ್ಲಿ ಅಂದಾಜು 1,16,144 ಕೋಟಿ ರೂ.ಗಳ ಹೂಡಿಕೆಯಾಗಲಿದೆ.

-ನಿತಿನ್ ಗಡ್ಕರಿ
ಕೇಂದ್ರ ಭೂ ಸಾರಿಗೆ ಸಚಿವ

ಕೇಂದ್ರ ಸರಕಾರ 1.16 ಲಕ್ಷ ಕೋಟಿ ವೆಚ್ಚದಲ್ಲಿ ಹೆದ್ದಾರಿ ಅಭಿವೃದ್ಧಿ ಪಡಿಸುವುದರಿಂದ ರಾಜ್ಯದ ಅಭಿವೃದ್ಧಿಯೂ ಆಗಲಿದೆ. ಆರ್ಥಿಕ ಬೆಳವಣಿಗೆಗೂ ಇದು ಪೂರಕವಾಗಲಿದೆ.

-ಬಿ.ಎಸ್.ಯಡಿಯೂರಪ್ಪ
ಮುಖ್ಯಮಂತ್ರಿ

## ವರ್ಚುಯಲ್ ಶಂಕು ಸ್ಥಾಪನೆ ಮಾಡಿದ ಮಾರ್ಗಗಳು




## ನೆರವು ಕೊಡಿ ಎಂದ ಬಿಎಸ್‌ವೈ

ಪ್ರವಾಹದಿಂದಾಗಿ ರಾಜ್ಯದಲ್ಲಿ ಭಾರಿ ಪ್ರಮಾಣದ ಮೂಲಸೌಕರ್ಯಕ್ಕೆ ಹಾನಿಯಾಗಿದೆ. ಇದನ್ನು ಸರಿಪಡಿಸಿಕೊಳ್ಳಲು ಹೆಚ್ಚುವರಿ ಅನುದಾನ ನೀಡಬೇಕು. ಬೆಂಗಳೂರು ನಗರ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿಗಳ ಕೂಡು ರಸ್ತೆಗಳಲ್ಲಿ ವಾಹನ ದಟ್ಟಣೆ ತಗ್ಗಿಸಲು ಕ್ರಮ ಕೈಗೊಳ್ಳಬೇಕು. ಬೆಂಗಳೂರು-ತುಮಕೂರು ನಡುವಿನ ಚತುಷ್ಪಥವನ್ನು 8 ಪಥದ ರಸ್ತೆಯಾಗಿ ಮೇಲ್ದರ್ಜೆಗೆ ಏರಿಸಬೇಕು ಎಂದು ಮುಖ್ಯಮಂತ್ರಿ ಬಿ. ಎಸ್.ಯಡಿಯೂರಪ್ಪ ಅವರು ಇದೇ ವೇಳೆ ಒತ್ತಾಯಿಸಿದರು. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಕೇಂದ್ರ ಸಚಿವರಾದ ಕೇಂದ್ರ ಸಚಿವರಾದ ಡಿ.ವಿ.ಸದಾನಂದಗೌಡ, ಪ್ರಹ್ಲಾದ ಜೋಶಿ, ಕೇಂದ್ರ ಹೆದ್ದಾರಿ ಮತ್ತು ರಸ್ತೆ ಸಾರಿಗೆ ಖಾತೆ ರಾಜ್ಯ ಸಚಿವ ಜನರಲ್ ಡಾ. ವಿ.ಕೆ.ಸಿಂಗ್, ಡಿಸಿಎಂ ಗೋವಿಂದ ಕಾರಜೋಳ, ರಾಜ್ಯಸಭೆ ಸದಸ್ಯ ಮಲ್ಲಿಕಾರ್ಜುನ ಖರ್ಗೆ, ಮುಖ್ಯ ಕಾರ್ಯದರ್ಶಿ ಟಿ.ಎಂ.ವಿಜಯ ಭಾಸ್ಕರ್ ಮತ್ತಿತರರು ಪಾಲ್ಗೊಂಡಿದ್ದರು.

## ರಾಜ್ಯದಲ್ಲಿ ರಸ್ತೆ ಮತ್ತು ಸೇತುವೆ ನಿರ್ಮಾಣದ ವಿವರ

- ತೀರ್ಥಹಳ್ಳಿ-ಶೃಂಗೇರಿ ದ್ವಿಪಥ ನಿರ್ಮಾಣ. 45 ಕಿಮೀ. 96 ಕೋಟಿ ರೂ.
- ಇಂಚಗೇರಿ- ಗಜೇಂದ್ರಗಢ ದ್ವಿಪಥ ನಿರ್ಮಾಣ. 12.05 ಕಿ.ಮೀ. 90.27 ಕೋಟಿ ರೂ.
- ಕಟಕೇರಿ-ಕುಶಾಲನಗರ. 39 ಕಿಮೀ. 30.5 ಕೋಟಿ
- ಕೊಯನಾಡು-ಬೋಯಿಕೇರಿ, ಸಂಪಾಜೆ ಘಾಟ್ ಸೆಕ್ಷನ್. 2.53 ಕಿಮೀ. 58.84 ಕೋಟಿ ರೂ.
- ಹೆಗ್ಗಡೆ-ಅಡ್ಡಹೊಳೆ, ಶಿರಾಡಿ ಘಾಟ್, 26 ಕಿಮೀ, 36.5 ಕೋಟಿ ರೂ.
- ಚಿಕ್ಕಮಗಳೂರು ಜಿಲ್ಲಾ ಗಡಿ-ಕೊಟ್ಟಿಗೆಹಾರ, ಚಾರ್ಮಾಡಿ ಘಾಟ್, 13 ಕಿಮೀ. 19.36 ಕೋಟಿ.
- ಭಾಣಾವರ ಕೆಳಸೇತುವೆ. 63 ಕೋಟಿ ರೂ. ವೆಚ್ಚ.
- ನಂಜನಗೂಡು ಕೆಳಸೇತುವೆ. 86.63 ಕೋಟಿ ರೂ.
- ತೀರ್ಥಹಳ್ಳಿ- ಉಡುಪಿನ. ಸೇತುವೆ ಮರುನಿರ್ಮಾಣ. 8.2 ಕೋಟಿ ರೂ.
- ಸಿಂಧನೂರು ಸಿಟಿ, ಮಸ್ಕಿಯ ಸಂತೆಕಲ್ಲೂರು ಗ್ರಾಮ, ಗೌರಿಬಿದನೂರು ಪಟ್ಟಣ ವ್ಯಾಪ್ತಿಯ ಸೇತುವೆ ನಿರ್ಮಾಣ, ವಿಸ್ತರಣೆ